# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 6 (18)

ಸದಸ್ಯರ ಹೆಸರು : ಶ್ರೀ ಎಸ್. ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ)

ಉತ್ತರಿಸುವ ದಿನಾಂಕ : 17-08-2026

ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಪ್ರಸ್ತುತ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಉಪನ್ಯಾಸಕರಿಗೆ ನಿಗದಿಪಡಿಸಿರುವ ವಿದ್ಯಾರ್ಹತೆ ಏನು ಮತ್ತು ಉಪನ್ಯಾಸಕರು ಯಾವ ತರಗತಿಗಳಿಗೆ ಬೋಧನೆ ಮಾಡುತ್ತಿದ್ದಾರೆ; (ಸಂಪೂರ್ಣವಾದ ಮಾಹಿತಿ ನೀಡುವುದು) | ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರಿಗೆ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು ಸರ್ಕಾರದ ಆದೇಶ ಸಂಖ್ಯೆ: ಇಡಿ 35 ಡಿಜಿಒ 2009 ದಿನಾಂಕ: 15-05-2014 ರಲ್ಲಿ ಆಯಾ ವಿಷಯದಲ್ಲಿ ಸ್ನಾತಕೋತ್ತರ ಪದವಿಯ ಜೊತೆಗೆ ಬಿ. ಇಡಿ. ಪದವಿಯನ್ನು ಹೊಂದಿರಬೇಕು ಎಂಬ ವಿದ್ಯಾರ್ಹತೆಯನ್ನು ನಿಗದಿಪಡಿಸಲಾಗಿದೆ.<br><br>ಈಗಾಗಲೇ ನೇಮಕಾತಿಗೊಂಡಿರುವ ಉಪನ್ಯಾಸಕರು ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿನ ಪ್ರಥಮ ಮತ್ತು ದ್ವಿತೀಯ ಪದವಿ ಪೂರ್ವ ತರಗತಿಗಳಿಗೆ ಪಾಠ ಬೋಧನೆ ಮಾಡುತ್ತಿದ್ದಾರೆ |
| ಆ) | ಪ್ರಸ್ತುತ ಶಾಲಾ ಶಿಕ್ಷಣ (ಪದವಿ ಪೂರ್ವ) ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಹೊಸ ತಿದ್ದುಪಡಿ ತರಲಾಗುತ್ತಿದೆಯೆ; ಒಂದು ವೇಳೆ ಇಲಾಖೆ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತಂದು ಪದವಿಪೂರ್ವ ಉಪನ್ಯಾಸಕರಿಂದ 9 ಮತ್ತು 10ನೇ ತರಗತಿಗಳಿಗೆ ಬೋಧನೆ ಮಾಡಲು ಅವಕಾಶ ನೀಡಿದರೆ ಶಿಕ್ಷಣದ ಶಿಸ್ತು ಆಡಳಿತಾತ್ಮಕ ಹಕ್ಕುಗಳು ಹಾಗೂ ಇಲಾಖೆಯ ಸ್ವಾತಂತ್ರ್ಯಕ್ಕೆ ಧಕ್ಕೆಯಾಗುವುದಿಲ್ಲವೇ; (ಸಂಪೂರ್ಣವಾದ ಮಾಹಿತಿ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಇಡಿ 04 ಯೋಸಕಾ 2017 ದಿನಾಂಕ:05.01.2018ರ ಆದೇಶದಲ್ಲಿ ಹೊಸದಾಗಿ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿದ್ದು, ಸದರಿ ಆದೇಶದಲ್ಲಿ ಉತ್ತಮ ಶೈಕ್ಷಣಿಕ ಸಮನ್ವಯ ಮತ್ತು ಶಿಕ್ಷಣದ ಗುಣಮಟ್ಟವನ್ನು ಸುಧಾರಿಸಲು, ಪ್ರೌಢಶಾಲಾ ಶಿಕ್ಷಕರಿಗೆ 6 ರಿಂದ 8 ನೇ ತರಗತಿಗಳ ಬೋಧನಾ ಜವಾಬ್ದಾರಿಯನ್ನು ಮತ್ತು ಪದವಿಪೂರ್ವ ಕಾಲೇಜಿನ ಉಪನ್ಯಾಸಕರಿಗೆ 9 ಮತ್ತು 10 ನೇ ತರಗತಿಗಳ ಬೋಧನಾ ಜವಾಬ್ದಾರಿಯನ್ನು ವಹಿಸಿಕೊಡಲು ಆದೇಶಿಸಲಾಗಿರುತ್ತದೆ.<br><br>ಪ್ರಸ್ತುತ ಶಾಲಾ ಶಿಕ್ಷಣ (ಪದವಿ ಪೂರ್ವ) ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಪಿ 9 ಡಿಪಿಐ 2026 ದಿನಾಂಕ: 14-07-2026ರಲ್ಲಿ ಈ ಮುಂದಿನಂತೆ ತಿದ್ದುಪಡಿಗಳನ್ನು ತರಲಾಗಿರುತ್ತದೆ |

| | | |
|---|---|---|
| | | "ಕರ್ನಾಟಕ ಸಾಮಾನ್ಯ ಸೇವೆಗಳು (ಪದವಿ ಪೂರ್ವ ಶಿಕ್ಷಣ) (ನೇಮಕಾತಿ) ನಿಯಮಗಳು, 2013ರ ಕೋಷ್ಟಕದ ಕ್ರಮ ಸಂಖ್ಯೆ:10ರಲ್ಲಿ "ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜುಗಳು" ರ ಅಂಕಣ ಸಂಖ್ಯೆ:4ರಲ್ಲಿನ ಆಯ್ಕೆ ವಿಧಾನ ಶೀರ್ಷಿಕೆಯ ಕೊನೆಯಲ್ಲಿ ಈ ಕೆಳಗಿನಂತೆ ಸೇರ್ಪಡೆಗೊಳಿಸತಕ್ಕದ್ದು.-<br><br>"ನೇರ ನೇಮಕಾತಿ ಮತ್ತು ಬಡ್ತಿಯ ಮೂಲಕ ಇನ್ನು ಮುಂದೆ ನೇಮಕಗೊಳ್ಳುವ ಉಪನ್ಯಾಸಕರು ಸರ್ಕಾರವು ನಿರ್ದಿಷ್ಟಪಡಿಸಿದ ಶಿಕ್ಷಣ ಸಂಸ್ಥೆಗಳಲ್ಲಿ 9 ಮತ್ತು 10 ನೇ ತರಗತಿಗಳನ್ನು ಬೋಧಿಸತಕ್ಕದ್ದು." ಸದರಿ ತಿದ್ದುಪಡಿಯ ಅನುಸಾರ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಉಪನ್ಯಾಸಕರುಗಳಿಗೆ ಈ ನಿಯಮಗಳು ಅನ್ವಯವಾಗುವುದಿಲ್ಲ. ಮುಂದೆ ನೇಮಕಾತಿ ಹೊಂದುವ ಉಪನ್ಯಾಸಕರುಗಳಿಗೆ ಅನ್ವಯಿಸಲಾಗುತ್ತಿದ್ದು ಅಂತಹ ಉಪನ್ಯಾಸಕರುಗಳು ಸರ್ಕಾರವು ನಿರ್ದಿಷ್ಟಪಡಿಸಿದ ಶಿಕ್ಷಣ ಸಂಸ್ಥೆಗಳಲ್ಲಿ 9ಮತ್ತು 10 ನೇ ತರಗತಿಗಳಿಗೆ ಪಾಠ ಬೋಧನೆ ಮಾಡಬೇಕಾಗುತ್ತದೆ. ಈ ರೀತಿಯಾಗಿ ಮುಂದೆ ನೇಮಕಗೊಳ್ಳುವ ಉಪನ್ಯಾಸಕರು ಲಭ್ಯವಿರುವ ಬೋಧನಾ ಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಸಿಕೊಂಡು ವಿದ್ಯಾರ್ಥಿಗಳ ಶೈಕ್ಷಣಿಕ ಹಿತಾಸಕ್ತಿಯನ್ನು ಕಾಪಾಡುವ ಉದ್ದೇಶ ಹಾಗೂ ಉಪನ್ಯಾಸಕರ ಕರ್ತವ್ಯ, ಜವಾಬ್ದಾರಿ, ಬೋಧನಾ ಅವಧಿ ಹಾಗೂ ಮೇಲ್ವಿಚಾರಣೆಯ ಬಗ್ಗೆ ಯಾವುದೇ ಗೊಂದಲ ಉಂಟಾಗುವುದಿಲ್ಲ. ಇದರಿಂದ ಶಿಕ್ಷಣದ ಶಿಸ್ತು ಮತ್ತಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳಲು ಸಾಧ್ಯವಾಗುತ್ತದೆ.<br><br>ಈ ಕ್ರಮದಿಂದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಆಡಳಿತಾತ್ಮಕ ಅಧಿಕಾರಗಳು ವರ್ಗಾವಣೆ ಆಗುವುದಿಲ್ಲ. ಈ ಕ್ರಮದಿಂದ ಪ್ರಸ್ತುತ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಯಾವುದೇ ಉಪನ್ಯಾಸಕರಿಗೆ 9 ಮತ್ತು 10ನೇ ತರಗತಿಗಳಿಗೆ ಬೋಧನೆ ಮಾಡುವ ಜವಾಬ್ದಾರಿ ವಹಿಸಲಾಗುವುದಿಲ್ಲ.<br><br>ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟವನ್ನು ಸುಧಾರಿಸುವುದು, ವಿಷಯ ಪರಿಣತಿಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದು ಹಾಗೂ ಅಗತ್ಯವಿರುವ ಕಡೆಗಳಲ್ಲಿ ಬೋಧನಾ ಮಾನವ ಸಂಪನ್ಮೂಲದ ಕೊರತೆಯನ್ನು ತಾತ್ಕಾಲಿಕವಾಗಿ ನಿವಾರಿಸುವುದು ಈ ಕ್ರಮದ ಪ್ರಮುಖ |

| | | |
|---|---|---|
| | | ಉದ್ದೇಶವಾಗಿದ್ದು, ಇದರಿಂದ ಉಪನ್ಯಾಸಕರ ಸೇವೆಯನ್ನು ಅಗತ್ಯಾನುಸಾರ ಬಳಸಿಕೊಳ್ಳುವುದರಿಂದ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಬೋಧನೆ ದೊರೆಯುತ್ತದೆ. |
| (ಇ) | ದಿನಾಂಕ: 23.12.2025 ರಂದು ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕ ವೃಂದದಿಂದ ಪ್ರಾಚಾರ್ಯರ ವೃಂದಕ್ಕೆ ಪದೋನ್ನತಿ ನೀಡುವ ಸಂಬಂಧ ಸಿ.ಆರ್‌ಗಳನ್ನು ಕರೆದಿದ್ದು, ಆ ಪಟ್ಟಿಯಲ್ಲಿರುವ ಅನೇಕ ಉಪನ್ಯಾಸಕರು ಈಗಾಗಲೇ ನಿವೃತ್ತಿ ಹೊಂದಿದ್ದು, ಇದುವರೆಗೂ ಪದೋನ್ನತಿ ನೀಡದೇ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಪದೋನ್ನತಿ ನೀಡುವ ವಿಷಯ ಯಾವ ಹಂತದಲ್ಲಿದೆ; ಸರ್ಕಾರದಿಂದ ಯಾವ ಕಾಲಮಿತಿಯೊಳಗೆ ಪದೋನ್ನತಿ ನೀಡಲಾಗುವುದು; ಸಂಪೂರ್ಣವಾದ ಮಾಹಿತಿ ನೀಡುವುದು) | ಪ್ರಾಂಶುಪಾಲರ ಹುದ್ದೆಗೆ ಮುಂಬಡ್ತಿ ನೀಡುವ ಸಲುವಾಗಿ ಅರ್ಹ ಉಪನ್ಯಾಸಕರಿಂದ ಕಾರ್ಯನಿರ್ವಹಣಾ ವರದಿ (CR) ಹಾಗೂ ಅಗತ್ಯ ವ್ಯಕ್ತಿಪೂರ್ವೋತ್ತರ/ಸೇವಾ ದಾಖಲೆಗಳನ್ನು ಆಹ್ವಾನಿಸಲಾಗಿದ್ದು, ಉಪನ್ಯಾಸಕರು CR ಹಾಗೂ ಇತರೆ ದಾಖಲೆಗಳನ್ನು ಸಲ್ಲಿಸಲು ತೆಗೆದುಕೊಂಡ ಸಮಯದಿಂದಲೂ ಪ್ರಕ್ರಿಯೆಗೆ ಕಾಲಾವಕಾಶವಾಗಿದೆ. ಸ್ವೀಕೃತ CR ಹಾಗೂ ಇತರೆ ದಾಖಲೆಗಳನ್ನು ಇಲಾಖಾ ಹಂತದಲ್ಲಿ ಪರಿಶೀಲಿಸಿ, ಇಲಾಖಾ ವಿಚಾರಣೆ, ಇಲಾಖಾ ಪರೀಕ್ಷೆ, ನ್ಯಾಯಾಂಗ ಪ್ರಕರಣಗಳು ಹಾಗೂ ಇತರೆ ಪ್ರತಿಕೂಲ ಅಂಶಗಳಿಗೆ ಸಂಬಂಧಿಸಿದ ದಾಖಲೆಗಳ ಪರಿಶೀಲನೆ ಮತ್ತು ಕ್ರೋಢೀಕರಣ ಕಾರ್ಯವನ್ನು ಕೈಗೊಳ್ಳಲಾಗಿದೆ. ಈ ಮಧ್ಯೆ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಅಧಿನಿಯಮ,2022ನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣಗಳ ಹಿನ್ನಲೆಯಲ್ಲಿ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 200448/2025ರಲ್ಲಿ ದಿನಾಂಕ: 19-11-2025 ರಂದು ನೀಡಿದ ಮಧ್ಯಂತರ ಆದೇಶದ ಮೂಲಕ, ಹೆಚ್ಚಿಸಲಾದ ಮೀಸಲಾತಿಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ನೇಮಕಾತಿ ಹಾಗೂ ಬಡ್ತಿ ಸೇರಿದಂತೆ ಸಂಬಂಧಿತ ಪ್ರಕ್ರಿಯೆಗಳನ್ನು ಮುಂದಿನ ವಿಚಾರಣೆಯವರೆಗೆ ಸ್ಥಗಿತಗೊಳಿಸಲಾಗಿತ್ತು. ನಂತರ, ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 01 ಸೆಹಿಮ 2026, ದಿನಾಂಕ: 27-02-2026 ರನ್ವಯ ಮಾನ್ಯ ನ್ಯಾಯಾಲಯವು ನೀಡುವ ಅಂತಿಮ ತೀರ್ಪಿಗೆ ಒಳಪಟ್ಟು ಹಾಗೂ ಸರ್ಕಾರದ ಮುಂದಿನ ಆದೇಶದವರೆಗೆ, ದಿನಾಂಕ: 27-11-2025 ರ ನಂತರ ರಾಜ್ಯ ಸಿವಿಲ್ ಸೇವಾ ಹುದ್ದೆಗಳಿಗೆ ಕೈಗೊಳ್ಳುವ ನೇರ ನೇಮಕಾತಿಗೆ ದಿನಾಂಕ: 28-12-2022 ರ ಸರ್ಕಾರದ ಆದೇಶಕ್ಕಿಂತ ಪೂರ್ವದಲ್ಲಿ ಜಾರಿಯಲ್ಲಿದ್ದ ಮೀಸಲಾತಿ ಪ್ರಮಾಣ ಮತ್ತು ರೋಸ್ಟರ್ ಬಿಂದುಗಳನ್ನು ಅನುಸರಿಸುವಂತೆ ಸೂಚಿಸಲಾಗಿರುತ್ತದೆ.<br><br>ತದನಂತರ, ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 02 ಸೇಹಿಮ 2026, ದಿನಾಂಕ: 13 05-2026 ರನ್ವಯ, |

| | | |
|---|---|---|
| | | ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಮೇಲ್ಕಂಡ ಮಧ್ಯಂತರ ಆದೇಶದ ಹಿನ್ನೆಲೆಯಲ್ಲಿ, ದಿನಾಂಕ: 20-06-1995ರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 8 ಸೇಹಿಮ 1995ರನ್ವಯ ಶೇ.50ರ ಮೀಸಲಾತಿ ಪ್ರಮಾಣವನ್ನು ತಾತ್ಕಾಲಿಕವಾಗಿ ಅಳವಡಿಸಿಕೊಂಡು, ನೇಮಕಾತಿ ಹಾಗೂ ಪ್ರವೇಶಾತಿಗಳಲ್ಲಿ ಪರಿಶಿಷ್ಟ ಜಾತಿಗೆ ಶೇ.15 ಮತ್ತು ಪರಿಶಿಷ್ಟ ಪಂಗಡಕ್ಕೆ ಶೇ.3ರಷ್ಟು ಪ್ರಾತಿನಿಧ್ಯವನ್ನು ನಿಗದಿಪಡಿಸಿ, 400 ಬಿಂದುಗಳ ಮಿಸಲಾತಿಯನ್ನು ಮಾನ್ಯ ನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಟ್ಟು ನೇಮಕಾತಿ ಪ್ರಕ್ರಿಯೆಯನ್ನು ಮುಂದುವರಿಸಲು ಆದೇಶಿಸಲಾಗಿದೆ.<br><br>ಸದರಿ ಆದೇಶದಲ್ಲಿ ನೇರ ನೇಮಕಾತಿಗೆ ಸಂಬಂಧಿಸಿದಂತೆ ಸ್ಪಷ್ಟ ಸೂಚನೆ ನೀಡಲಾಗಿದ್ದರೂ, ಮೀಸಲಾತಿ ಹೆಚ್ಚಳಕ್ಕೆ ಸಂಬಂಧಿಸಿದ ಪ್ರಕರಣವು ಮಾನ್ಯ ನ್ಯಾಯಾಲಯದ ವಿಚಾರಣೆಯಲ್ಲಿರುವ ಹಿನ್ನೆಲೆಯಲ್ಲಿ, ಉಪನ್ಯಾಸಕರ ವೃಂದದಿಂದ ಪ್ರಾಂಶುಪಾಲರ ವೃಂದಕ್ಕೆ ಮುಂಬಡ್ತಿ ನೀಡುವ ಸಂದರ್ಭದಲ್ಲಿ ಯಾವ ಆದೇಶದನ್ವಯ ಮೀಸಲಾತಿ ಪ್ರಮಾಣ ಹಾಗೂ ರೋಸ್ಟರ್ ಬಿಂದುಗಳನ್ನು ಪರಿಗಣಿಸಿ ಬಡ್ತಿ ಪ್ರಕ್ರಿಯೆ ಕೈಗೊಳ್ಳಬೇಕು ಎಂಬ ಕುರಿತು ಸ್ಪಷ್ಟ ಮಾರ್ಗದರ್ಶನ ಲಭ್ಯವಿರಲಿಲ್ಲ.<br><br>ಆದ್ದರಿಂದ, ಪ್ರಾಂಶುಪಾಲರ ವೃಂದದ ಮುಂಬಡ್ತಿ ಪ್ರಕ್ರಿಯೆಯನ್ನು ನಿಯಮಾನುಸಾರ ಮುಂದುವರಿಸುವ ಸಲುವಾಗಿ ಮುಂಬಡ್ತಿಯಲ್ಲಿ ಯಾವ ರೋಸ್ಟರ್ ಅಳವಡಿಸಬೇಕು ಎಂಬ ಬಗ್ಗೆ ಪದವಿ ಪೂರ್ವ ಇಲಾಖೆಯಿಂದ ಮಾರ್ಗದರ್ಶನ ಕೋರಲಾಗಿದ್ದು, ಈ ಕುರಿತು ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ.<br><br>ಮುಂದುವರೆದು, ಹಾಲಿ ಚಾಲ್ತಿಯಲ್ಲಿರುವ 17% ಮತ್ತು 7% ಮೀಸಲಾತಿ ನಿಯಮದಂತೆಯೇ ಸೇವಾ ಹಿರಿತನದ ಆಧಾರದ ಮೇಲೆ ಅರ್ಹರ ಪಟ್ಟಿಯನ್ನು ಸಿದ್ಧಪಡಿಸಿ ಸಲ್ಲಿಸಿರುವ ಪ್ರಸ್ತಾವನೆಯು ಸರ್ಕಾರದಲ್ಲಿ ಪ್ರಸ್ತಾವನೆಯು ಸ್ವೀಕೃತವಾಗಿದ್ದು, ಸದರಿ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ.<br><br>ಇದಲ್ಲದೇ, ಸಮಾಜ ಕಲ್ಯಾಣ ಇಲಾಖೆಯ ತನಿಖಾ ತಂಡವು ದಿನಾಂಕ:12-12-2019 ರಿಂದ 17-12-2019ರವರೆಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿ ತನಿಖೆ ಕೈಗೊಂಡಿತ್ತು. ನಂತರ ಆಯುಕ್ತರು, |

| | | |
|---|---|---|
| | | ಸಮಾಜ ಕಲ್ಯಾಣ ಇಲಾಖೆ, ಇವರು ದಿನಾಂಕ:07-07-2023 ರಂದು ನೀಡಿದ ತಪಾಸಣಾ ವರದಿಯಲ್ಲಿ, 80 ಬ್ಯಾಕ್‌ಲಾಗ್ ಹುದ್ದೆಗಳನ್ನು ಗುರುತಿಸಿ, ಅವುಗಳನ್ನು ಕೂಡಲೇ ಭರ್ತಿ ಮಾಡುವಂತೆ ವರದಿ ನೀಡಿದ್ದರು. ಸದರಿ ವರದಿಗೆ ಇಲಾಖೆಯಿಂದ ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 21 ಎಸ್‌ಬಿಸಿ 1997, ದಿನಾಂಕ:03-02-1999 ರನ್ವಯ ಪ್ರಾಂಶುಪಾಲರ ವೃಂದಕ್ಕೆ ಉಪನ್ಯಾಸಕರ ವೃಂದದಿಂದ ಈ ಹಿಂದೆ ನೀಡಲಾಗಿರುವ ಬಡ್ತಿಗಳು ನಿಯಮಾನುಸಾರವಾಗಿವೆ ಎಂದು ಇಲಾಖೆಯು ವರದಿ ಮತ್ತು ಸ್ಪಷ್ಟ ಅಭಿಪ್ರಾಯವನ್ನು ನೀಡಿರುತ್ತದೆ. ಈ ಕುರಿತು, ಕರ್ನಾಟಕ ವಿಧಾನಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯು ದಿನಾಂಕ:22-05-2026, 12-06-2026, 19-06-2026, 03-07-2026ರಂದು ನಡೆಸಿದ ಸಭೆಗಳಲ್ಲಿ, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಯಲ್ಲಿ 2016ರಿಂದ ಇದುವರೆಗೆ ಉಪನ್ಯಾಸಕರ ವೃಂದದಿಂದ ಪ್ರಾಂಶುಪಾಲರ ವೃಂದಕ್ಕೆ ಬಡ್ತಿ ನೀಡುವ ಸಂದರ್ಭದಲ್ಲಿ, ಮೀಸಲಾತಿ ಪಾಲನೆಯ ಕುರಿತು, ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಇವರು ದಿನಾಂಕ:07-07-2023ರಂದು ನೀಡಿದ ತಪಾಸಣಾ ವರದಿಯಲ್ಲಿ, ಗುರುತಿಸಿರುವ 80 ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಿದ ನಂತರವೇ ಪ್ರಾಂಶುಪಾಲರ ವೃಂದಕ್ಕೆ ಸಂಬಂಧಿಸಿದ ಮುಂದಿನ ಬಡ್ತಿ ಪ್ರಕ್ರಿಯೆಗಳನ್ನು ಕೈಗೊಳ್ಳುವಂತೆ ಮೌಖಿಕವಾಗಿ ಸಮಿತಿಯು ಸೂಚಿಸಿರುತ್ತದೆ.<br><br>ಪ್ರಾಂಶುಪಾಲರ ವೃಂದಕ್ಕೆ ಉಪನ್ಯಾಸಕರ ವೃಂದದಿಂದ ಬಡ್ತಿ ನೀಡುವ ಪ್ರಕ್ರಿಯೆಯು ಹಿಂದಿನಿಂದಲೂ ಸರ್ಕಾರದ ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳು, ರೋಸ್ಟರ್ ಪದ್ಧತಿ ಹಾಗೂ ಕರ್ನಾಟಕ ನಾಗರಿಕ ಸೇವಾ ನಿಯಮಗಳನ್ವಯ ಇಲಾಖಾ ಮುಂಬಡ್ತಿ ಸಮಿತಿಯ ಮೂಲಕ ಕೈಗೊಳ್ಳಲಾಗುತ್ತಿದೆ. ಪ್ರಾಂಶುಪಾಲರ ವೃಂದದ 2013 ರವರೆಗೆ ನಿರ್ವಹಿಸಿರುವ ರೋಸ್ಟರ್ ವಹಿಯನ್ನು ಪರಿಶೀಲಿಸಿದ ಸಂದರ್ಭದಲ್ಲಿ, ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಇವರ ತನಿಖಾ ವರದಿ ದಿನಾಂಕ:29-05-2014 ರಲ್ಲಿ ಪ್ರಾಂಶುಪಾಲರ ವೃಂದದ ಪರಿಶಿಷ್ಟ ಜಾತಿಗೆ ಸಂಬಂಧಿಸಿದ ಒಂದು ಬ್ಯಾಕ್‌ಲಾಗ್ ಹುದ್ದೆಯನ್ನು ಬಡ್ತಿ ಮೂಲಕ ಭರ್ತಿ ಮಾಡಲು ಅಗತ್ಯ ಕ್ರಮವಹಿಸುವಂತೆ ತಿಳಿಸಲಾಗಿತ್ತು.<br><br>ಅದರಂತೆ ದಿನಾಂಕ:11-09-2014ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿಯ ಸಭೆಯ |

| | | |
|---|---|---|
| | | ನಿರ್ಣಯದನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 391 ಡಿಜಿಎಬಿಡಿ, 2013, ಬೆಂಗಳೂರು, ದಿನಾಂಕ:10-03-2015ರನ್ವಯ ಶ್ರೀ ಎಸ್. ಎನ್. ಬಗಲಿ ಇವರಿಗೆ ಬಡ್ತಿ ನೀಡಿ ಸದರಿ ಬ್ಯಾಕ್‌ಲಾಗ್ ಹುದ್ದೆಯನ್ನು ಸರಿದೂಗಿಸಲಾಗಿರುತ್ತದೆ.<br><br>ಮುಂದುವರೆದು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಯ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ವೃಂದದಿಂದ ನಿವೃತ್ತಿ, ನಿಧನ, ರಾಜೀನಾಮೆ ಹಾಗೂ ಉಪ ನಿರ್ದೇಶಕರ ಹುದ್ದೆಗೆ ಬಡ್ತಿಯಿಂದ ತೆರವಾದ ಪ್ರಾಂಶುಪಾಲರ ಹುದ್ದೆಗಳನ್ನು ಭರ್ತಿ ಮಾಡುವ ಉದ್ದೇಶದಿಂದ 2016 ರಿಂದ 2021 ರವರೆಗೆ ವಿವಿಧ ಹಂತಗಳಲ್ಲಿ ಇಲಾಖಾ ಮುಂಬಡ್ತಿ ಸಮಿತಿ ಸಭೆಗಳನ್ನು ನಡೆಸಲಾಗಿದೆ. ದಿನಾಂಕ:13-10-2016 ರಂದು ನಡೆದ DPCಯಲ್ಲಿ 135 ಉಪನ್ಯಾಸಕರನ್ನು, ದಿನಾಂಕ:12-04-2018 ರಂದು 224 ಉಪನ್ಯಾಸಕರನ್ನು, ದಿನಾಂಕ:22-10-2019 ರಂದು 95 ಉಪನ್ಯಾಸಕರನ್ನು, ದಿನಾಂಕ:17-08-2020 ರಂದು 306 ಉಪನ್ಯಾಸಕರನ್ನು, ದಿನಾಂಕ:14-07-2021 ರಂದು 43 ಉಪನ್ಯಾಸಕರನ್ನು ಹಾಗೂ ದಿನಾಂಕ:28-10-2021 ರಂದು 102 ಉಪನ್ಯಾಸಕರನ್ನು ಪರಿಗಣಿಸಲಾಗಿದೆ.<br><br>ಈ ಪೈಕಿ 2016, 2018, 2019 ಹಾಗೂ 2021ರ ಬಡ್ತಿ ಪ್ರಕ್ರಿಯೆಗಳಲ್ಲಿ ಬಡ್ತಿ ನೀಡಬೇಕಾದ ಹುದ್ದೆಗಳನ್ನು ಒಳಗೊಂಡಂತೆ ಆಯಾಯ ವೃಂದದ ಕಾರ್ಯನಿರತ ವೃಂದ ಬಲವನ್ನು ಪರಿಗಣಿಸಿದಾಗ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ ಪ್ರಾತಿನಿಧ್ಯವು ನಿಗದಿತ ಪ್ರಮಾಣವಾದ ಕ್ರಮವಾಗಿ ಶೇಕಡ 15 ಮತ್ತು ಶೇಕಡ 3ಕ್ಕಿಂತ ಹೆಚ್ಚಾಗಿದ್ದ ಹಿನ್ನೆಲೆಯಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 21 ಎಸ್‌ಬಿಸಿ 1997, ದಿನಾಂಕ:03-02-1999 ರನ್ವಯ ಬಡ್ತಿಯಲ್ಲಿ ಮೀಸಲಾತಿ ರೋಸ್ಟರ್ ಅನ್ನು ಅನ್ವಯಿಸದಿರುವ ಕ್ರಮ ಕೈಗೊಳ್ಳಲಾಗಿತ್ತು. ಬಿ.ಕೆ. ಪವಿತ್ರ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ದಿನಾಂಕ:09-02-2017ರ ತೀರ್ಪಿನನ್ವಯವೂ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಅದೇ ರೀತಿ 2020 ಮತ್ತು 2021ರ ಬಡ್ತಿ ಸಂದರ್ಭದಲ್ಲಿ ಬಡ್ತಿ ನೀಡಬೇಕಾದ ಹುದ್ದೆಗಳನ್ನು ಒಳಗೊಂಡಂತೆ ಕಾರ್ಯನಿರತ ವೃಂದಬಲವನ್ನು ಪರಿಗಣಿಸಿದಾಗ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ ಪ್ರಾತಿನಿಧ್ಯವು ನಿಗದಿತ ಪ್ರಮಾಣಕ್ಕಿಂತ ಕಡಿಮೆ ಇದ್ದ ಹಿನ್ನೆಲೆಯಲ್ಲಿ ಚಾಲ್ತಿಯಲ್ಲಿದ್ದ ಮೀಸಲಾತಿ ನಿಯಮಗಳನ್ವಯ ರೋಸ್ಟರ್ ಪಾಲಿಸಿ |

| | | |
|---|---|---|
| | | ಬಡ್ತಿ ನೀಡಲಾಗಿದೆ.<br><br>ಸಮಾಜ ಕಲ್ಯಾಣ ಇಲಾಖೆಯ ತನಿಖಾ ತಂಡವು ದಿನಾಂಕ:12-12-2019 ರಿಂದ 17-12-2019 ರವರೆಗೆ ಪ್ರಾಂಶುಪಾಲರ ಬಡ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿ ತನಿಖೆ ಕೈಗೊಂಡಿತ್ತು. ನಂತರ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಇವರು ದಿನಾಂಕ:07-07-2023ರಂದು ನೀಡಿದ ತಪಾಸಣಾ ವರದಿಯಲ್ಲಿ 80 ಬ್ಯಾಕ್‌ಲಾಗ್ ಹುದ್ದೆಗಳನ್ನು ಗುರುತಿಸಿ, ಅವುಗಳನ್ನು ಕೂಡಲೇ ಭರ್ತಿ ಮಾಡಿ ಅನುಪಾಲನಾ ವರದಿಯನ್ನು ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಹಾಗೂ ಇತರೆ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) ನಿಯಮಗಳು, 1992 ರ ಸೆಕ್ಷನ್ 10(2) ರನ್ವಯ ಸಲ್ಲಿಸಲು ಅಗತ್ಯ ಕ್ರಮವಹಿಸುವಂತೆ ತಿಳಿಸಿದ್ದರು.<br><br>ದಿನಾಂಕ:13-10-2023ರಂದು ನಡೆದ ಸಭೆಯಲ್ಲಿ ಪ್ರಾಂಶುಪಾಲರ ವೃಂದಕ್ಕೆ ಉಪನ್ಯಾಸಕರ ವೃಂದದಿಂದ ಬಡ್ತಿ ನೀಡುವ ಸಂದರ್ಭದಲ್ಲಿ ಮೀಸಲಾತಿ ರೋಸ್ಟರ್ ಬಿಂದುಗಳನ್ನು ಉಲ್ಲಂಘಿಸಲಾಗಿದೆಯೇ ಎಂಬ ಬಗ್ಗೆ ಪರಿಶೀಲಿಸಲಾಯಿತು. ಪದವಿ ಪೂರ್ವ ಇಲಾಖೆಯು ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 21 ಎಸ್‌ಬಿಸಿ 1997, ದಿನಾಂಕ:03-02-1999ರನ್ವಯ ಹಿಂದಿನ DPCಗಳಲ್ಲಿ ಕೈಗೊಂಡ ಕ್ರಮಗಳು ಹಾಗೂ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ದಿನಾಂಕ:14-08-2023ರ ತೀರ್ಪಿನ ಅಂಶಗಳನ್ನು ಸರ್ಕಾರದ ಗಮನಕ್ಕೆ ತಂದಿತ್ತು. ಸದರಿ ಸಭೆಯಲ್ಲಿ, ಸಮಾಜ ಕಲ್ಯಾಣ ಇಲಾಖೆಯು ದಿನಾಂಕ:07-07-2023ರಂದು ನೀಡಿರುವ ತಪಾಸಣಾ ವರದಿಯನ್ನು ಪುಷ್ಠೀಕರಿಸುವ ಸೂಕ್ತ ಸರ್ಕಾರಿ ಆದೇಶವನ್ನು ಸಕಾರಣಗಳೊಂದಿಗೆ ಸಲ್ಲಿಸುವಂತೆ ಸೂಚಿಸಲಾಗಿತ್ತು. ನಿಗದಿತ ಅವಧಿಯಲ್ಲಿ ಅಂತಹ ಸರ್ಕಾರಿ ಆದೇಶವನ್ನು ಸಲ್ಲಿಸದಿದ್ದಲ್ಲಿ, ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 21 ಎಸ್‌ಬಿಸಿ 1997, ದಿನಾಂಕ:03-02-1999ರನ್ವಯ ಪ್ರಾಂಶುಪಾಲರ ವೃಂದಕ್ಕೆ ಉಪನ್ಯಾಸಕರ ವೃಂದದಿಂದ ಈ ಹಿಂದೆ ನೀಡಲಾಗಿರುವ ಬಡ್ತಿಗಳು ನಿಯಮಾನುಸಾರವಾಗಿವೆ ಎಂದು ಪರಿಗಣಿಸಿ, ಮುಂದಿನ ಬಡ್ತಿ ಪ್ರಕ್ರಿಯೆಗಳನ್ನು ಕೈಗೊಳ್ಳಲು ಅಗತ್ಯ ಕ್ರಮವಹಿಸುವುದಾಗಿ ಸಮಿತಿಯು ನಿರ್ಣಯಿಸಿತ್ತು.<br><br>ಮುಂದುವರೆದು, ಪ್ರಾಂಶುಪಾಲರ ಹುದ್ದೆಗೆ |

| | | |
|---|---|---|
| | | ನೇಮಕಾತಿ ಮತ್ತು ಶಿಸ್ತು ಪ್ರಾಧಿಕಾರ ಸರ್ಕಾರವಾಗಿರುವ ಹಿನ್ನೆಲೆಯಲ್ಲಿ, ದಿನಾಂಕ:13-10-2023ರಂದು ನಡೆದ ಸಭೆಯ ನಿರ್ಧಾರದಂತೆ, ಉಪನ್ಯಾಸಕರಿಂದ ಪ್ರಾಂಶುಪಾಲರ ಹುದ್ದೆಗೆ ಬಡ್ತಿಗೆ ಸಂಬಂಧಿಸಿದಂತೆ ಉಳಿಕೆ ಮೂಲ ವೃಂದದ 300 ಉಪನ್ಯಾಸಕರು ಹಾಗೂ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ 61 ಉಪನ್ಯಾಸಕರ ಅಗತ್ಯ ವ್ಯಕ್ತಿಪೂರ್ವೋತ್ತರ/ಸೇವಾ ದಾಖಲೆಗಳನ್ನು ಪರಿಶೀಲಿಸಿ, ದಿನಾಂಕ:12-03-2024ರಂದು ಇಲಾಖಾ ಮುಂಬಡ್ತಿ ಸಮಿತಿ ಸಭೆ ನಡೆಸಲಾಗಿತ್ತು.<br><br>ದಿನಾಂಕ:12-03-2024 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ಒಟ್ಟು 302 ಉಪನ್ಯಾಸಕರನ್ನು ಪರಿಗಣಿಸಲಾಗಿತ್ತು. ಈ ಪೈಕಿ ಕಲ್ಯಾಣ ಕರ್ನಾಟಕ ವೃಂದದಲ್ಲಿ ರೋಸ್ಟರ್ ಬಿಂದು 48ರವರೆಗೆ ಒಟ್ಟು 48 ಉಪನ್ಯಾಸಕರನ್ನು ಪರಿಗಣಿಸಲಾಗಿದ್ದು, ಸಾಮಾನ್ಯ ಅರ್ಹತೆ ಜೇಷ್ಠತಾ ಸಂಖ್ಯೆ 243, ಪರಿಶಿಷ್ಟ ಜಾತಿ ಜೇಷ್ಠತಾ ಸಂಖ್ಯೆ 242 ಹಾಗೂ ಪರಿಶಿಷ್ಟ ಪಂಗಡ ಜೇಷ್ಠತಾ ಸಂಖ್ಯೆ 240ರವರೆಗೆ ಪರಿಗಣಿಸಲಾಗಿತ್ತು. ಉಳಿಕೆ ಮೂಲ ವೃಂದದಲ್ಲಿ ರೋಸ್ಟರ್ ಬಿಂದು 54ರವರೆಗೆ ಒಟ್ಟು 254 ಉಪನ್ಯಾಸಕರನ್ನು ಪರಿಗಣಿಸಲಾಗಿದ್ದು, ಸಾಮಾನ್ಯ ಅರ್ಹತೆ ಜೇಷ್ಠತಾ ಸಂಖ್ಯೆ 6440, ಪರಿಶಿಷ್ಟ ಜಾತಿ ಜೇಷ್ಠತಾ ಸಂಖ್ಯೆ 7521 ಹಾಗೂ ಪರಿಶಿಷ್ಟ ಪಂಗಡ ಜೇಷ್ಠತಾ ಸಂಖ್ಯೆ 8500ರವರೆಗೆ ಪರಿಗಣಿಸಲಾಗಿತ್ತು.<br><br>ಪ್ರಾಂಶುಪಾಲರ ವೃಂದಕ್ಕೆ ಉಪನ್ಯಾಸಕರ ವೃಂದದಿಂದ ನೀಡಲಾದ ಬಡ್ತಿಯಲ್ಲಿ ಮೀಸಲಾತಿ ರೋಸ್ಟರ್ ಉಲ್ಲಂಘನೆಯಾಗಿದೆ ಎಂದು ಶ್ರೀ ಚಂದ್ರಪ್ಪ ಎ.ಕೆ. ಹಾಗೂ ಇತರ 82 ಉಪನ್ಯಾಸಕರು ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಅರ್ಜಿ ಸಂಖ್ಯೆ:207-227/2020ನ್ನು ದಾಖಲಿಸಿದ್ದರು. ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯು ದಿನಾಂಕ:14-08-2023ರಂದು ಸದರಿ ಅರ್ಜಿಯನ್ನು ಯಾವುದೇ ಅರ್ಹತೆ ಇಲ್ಲದ ಕಾರಣ ವಜಾಗೊಳಿಸಿರುತ್ತದೆ. ಸದರಿ ತೀರ್ಪಿನ ವಿರುದ್ಧ ಅರ್ಜಿದಾರರು ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಬಡ್ತಿಯಲ್ಲಿ ಮೀಸಲಾತಿಗೆ ಸಂಬಂಧಿಸಿದಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ದಿನಾಂಕ:12-03-2024ರಂದು ನೀಡಿರುವ ಅಭಿಪ್ರಾಯದಂತೆ, ದಿನಾಂಕ:27-04-1978ರ ಸರ್ಕಾರಿ ಆದೇಶ ಹಾಗೂ ದಿನಾಂಕ:30-08-1979ರ ತಿದ್ದುಪಡಿ ಆದೇಶಗಳನ್ವಯ ಬಡ್ತಿಯಲ್ಲಿ ಮೀಸಲಾತಿಗಾಗಿ ನಿಗದಿಪಡಿಸಿರುವ |

| | | |
|---|---|---|
| | | ರೋಸ್ಟರನ್ನು ನಿರಂತರವಾಗಿ ಅನುಸರಿಸಬೇಕಾಗುತ್ತದೆ. ನಂತರದ ದಿನಾಂಕ:03-02-1999 ಮತ್ತು 13-04-1999ರ ಆದೇಶಗಳನ್ವಯ ಬಡ್ತಿ ವೃಂದದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ ಪ್ರಾತಿನಿಧ್ಯವು ಕ್ರಮವಾಗಿ ಶೇ.15 ಮತ್ತು ಶೇ.3 ತಲುಪುವವರೆಗೆ ರೋಸ್ಟರ್ ಅನ್ವಯಿಸಿ, ಸದರಿ ಪ್ರಮಾಣ ತಲುಪಿದ ನಂತರ ರೋಸ್ಟರ್ ಅನುಸರಿಸುವ ಅಗತ್ಯವಿರುವುದಿಲ್ಲ. ಅಲ್ಲದೆ, ದಿನಾಂಕ:06-11-2021ರ ಸುತ್ತೋಲೆಯು ಸ್ವಂತ ಅರ್ಹತೆಯ ಆಧಾರದ ಮೇಲೆ ನೇಮಕಗೊಂಡ SC/ST ನೌಕರರನ್ನು ಬಡ್ತಿಯಲ್ಲಿ ಪರಿಗಣಿಸುವ ಕುರಿತು ಮಾರ್ಗಸೂಚಿಗಳನ್ನು ನೀಡಿದ್ದು, ಇದು ಪೂರ್ವಾನ್ವಯ ಪರಿಣಾಮ ಹೊಂದಿರುವುದಿಲ್ಲವೆಂದು ತಿಳಿಸಲಾಗಿದೆ. ಆದ್ದರಿಂದ, ಮೇಲ್ಕಂಡ ಸರ್ಕಾರಿ ಆದೇಶಗಳು ಮತ್ತು ಸುತ್ತೋಲೆಗಳನ್ವಯ ಪ್ರಸ್ತಾವನೆಯನ್ನು ಪರಿಶೀಲಿಸುವಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಅಭಿಪ್ರಾಯ ನೀಡಿರುತ್ತದೆ. ಈ ಮೇಲಿನ ಅಂಶಗಳನ್ನು ಸಲ್ಲಿಸುತ್ತಾ, ಹಿಂದಿನ ಇಲಾಖಾ ಮುಂಬಡ್ತಿ ಸಮಿತಿ ಸಭೆಗಳಲ್ಲಿ ನೀಡಿರುವ ಸ್ಥಾನಪನ್ನು ಬಡ್ತಿಗಳಲ್ಲಿ ಯಾವುದೇ ನಿಯಮಾವಳಿಗಳ ಲೋಪದೋಷಗಳು ಆಗಿರುವುದಿಲ್ಲ ಎಂದು ಕಂಡುಬಂದಿರುತ್ತದೆ. ಆದ್ದರಿಂದ, ಮುಂದಿನ ದಿನಗಳಲ್ಲಿ ಸರ್ಕಾರ ಹಂತದಲ್ಲಿ ಇಲಾಖಾ ಮುಂಬಡ್ತಿ ಸಭೆಯನ್ನು ಆಯೋಜಿಸಿ, ಉಪನ್ಯಾಸಕರು ವೃಂದದಿಂದ ಪ್ರಾಂಶುಪಾಲರು ವೃಂದಕ್ಕೆ ಮುಂಬಡ್ತಿಯನ್ನು ನೀಡುವ ಕ್ರಮವಹಿಸಲಾಗುವುದು. |
| ಈ) | ರಾಜ್ಯದ ಪದವಿ ಪೂರ್ವ ಕಾಲೇಜುಗಳಲ್ಲಿ ಈಗಾಗಲೇ ಜಾರಿಯಲ್ಲಿರುವ ಕಿರುಪರೀಕ್ಷೆಗಳು, ಅರ್ಧವಾರ್ಷಿಕ ಪರೀಕ್ಷೆಗಳು ಮತ್ತು ಎರಡು ಪೂರ್ವ ಸಿದ್ಧತಾ ಪರೀಕ್ಷೆಗಳ ಜೊತೆಗೆ 2026-27ನೇ ಸಾಲಿನಿಂದ LBA(LESSON BASED ASSESSEMENT) ಎಂಬ ಹೆಚ್ಚುವರಿ ಪರೀಕ್ಷೆಗಳನ್ನು ಪ್ರತಿ ವಿಷಯಕ್ಕೆ 10 ಪರೀಕ್ಷೆಗಳಂತೆ ನಿಗದಿಪಡಿಸಿರುವ ಮಾದರಿಯಲ್ಲೇ ಕಡ್ಡಾಯವಾಗಿ ಕೈಗೊಳ್ಳಬೇಕೆಂಬ ನಿಯಮವನ್ನು ಜಾರಿಗೊಳಿಸಿದ್ದು ಈ ರೀತಿಯ ಹೆಚ್ಚು ಪರೀಕ್ಷೆಗಳಿಂದ ವಿದ್ಯಾರ್ಥಿಗಳ ವೈವಿಧ್ಯಮಯ ಕಲಿಕೆಗೆ ಬೋಧನಾ ಗುಣಮಟ್ಟ, ಬೋಧನಾ ಅವಧಿಗಳ ಮೇಲೆ ಹಾಗೂ ವಿದ್ಯಾರ್ಥಿಗಳ | 2026-27 ನೇ ಶೈಕ್ಷಣಿಕ ಸಾಲಿನಿಂದ ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳಲ್ಲಿ ಈಗಾಗಲೇ ಜಾರಿಯಲ್ಲಿರುವ ಕಿರುಪರೀಕ್ಷೆಗಳು, ಅರ್ಧವಾರ್ಷಿಕ ಪರೀಕ್ಷೆಗಳು ಮತ್ತು ಎರಡು ಪೂರ್ವ ಸಿದ್ಧತಾ ಪರೀಕ್ಷೆಗಳ ಜೊತೆಗೆ LBA (LESSON BASED ASSESSEMENT) ಘಟಕ ಆಧಾರಿತ ಮೌಲ್ಯಮಾಪನವನ್ನು ಪ್ರಥಮ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಫಲಿತಾಂಶ ಸುಧಾರಿಸಲು ಹಾಗೂ ಪ್ರತಿ ಘಟಕದ ನಂತರ ವಿದ್ಯಾರ್ಥಿಯ ಕಲಿಕೆಯನ್ನು ದೃಢೀಕರಿಸಲು ಘಟಕ ಆಧಾರಿತ ಮೌಲ್ಯಮಾಪನ ಪ್ರಶ್ನೆ ಕೋಠಿಯನ್ನು ಸಿದ್ಧಪಡಿಸಿ ಇಲಾಖೆಯ ಜಾಲತಾಣದಲ್ಲಿ ಅಳವಡಿಸಲಾಗಿದೆ.<br><br>ಈ ಸಂಬಂಧ ಮನಶಾಸ್ತ್ರಜ್ಞರ ಜೊತೆಗೆ ಚರ್ಚಿಸಲಾಗಿರುವುದಿಲ್ಲ. ಆದರೆ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಫಲಿತಾಂಶ ಸುಧಾರಣೆ ಕಲಿಕೆಯಲ್ಲಿ ನಿರಂತರತೆಯನ್ನು ಕಾಪಾಡಲು |

<table>
<tr>
<td></td>
<td>ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧತೆಯ ಮೇಲೆ ಗಂಭೀರ ದುಷ್ಪರಿಣಾಮ ಬೀರುತ್ತಿರುವುದರ ಬಗ್ಗೆ ಸರ್ಕಾರ ಶಿಕ್ಷಣ ತಜ್ಞರ ಜೊತೆಗೆ ಹಾಗೂ ಮನಶಾಸ್ತ್ರಜ್ಞರ ಜೊತೆಗೆ ಚರ್ಚಿಸಿದೆಯೇ; ಚರ್ಚಿಸಿದಲ್ಲಿ, ಸದರಿಯವರು ನೀಡಿರುವ ಮಾರ್ಗದರ್ಶನಗಳೇನು; ಇಲ್ಲದಿದ್ದಲ್ಲಿ, ಈ ರೀತಿಯ ನಿಯಮವನ್ನು ಯಾವ ಕಾರಣಕ್ಕಾಗಿ ಅನುಷ್ಠಾನಗೊಳಿಸಲಾಗಿದೆ?<br>(ಸಂಪೂರ್ಣ ಮಾಹಿತಿ ನೀಡುವುದು)</td>
<td>ಯೋಜನೆಯನ್ನು ಕಲ್ಪಿಸಲಾಗಿದೆ. ಸದರಿ ಯೋಜನೆಯು ಈ ಕೆಳಕಂಡ ಉದ್ದೇಶಗಳನ್ನು ಒಳಗೊಂಡಿರುತ್ತದೆ.<br>• ವಿದ್ಯಾರ್ಥಿಗಳ ಕಲಿಕೆಯನ್ನು ಸುಧಾರಿಸಲು ಹಾಗೂ ಪ್ರತಿ ಘಟಕದ ನಂತರ ಮಗುವಿನ ಕಲಿಕೆಯನ್ನು ದೃಢೀಕರಿಸಿಕೊಳ್ಳುವುದು.<br>• ವಿದ್ಯಾರ್ಥಿಗಳ ಪರೀಕ್ಷಾ ಒತ್ತಡವನ್ನು ಕಡಿಮೆ ಮಾಡುವುದು. ಕಡಿಮೆ ಮಾಡಿ ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸುವುದು.<br>• ನಿರಂತರ ಅಂಕಗಳ ವಿಶ್ಲೇಷಣೆಯಿಂದ ನಿಗದಿತ ಕಲಿಕಾ ಫಲಗಳಿಗೆ ಅವಕಾಶ ನೀಡಿ ಉತ್ತಮ ಫಲಿತಾಂಶವನ್ನು ಪಡೆಯುವುದು.<br>• ಪ್ರತಿ ಹಂತದ ವಿದ್ಯಾರ್ಥಿಯ ಕಲಿಕೆಯನ್ನು ಪೋಷಕರ ಗಮನಕ್ಕೆ ತರುವುದು<br>• ವಿದ್ಯಾರ್ಥಿಗಳ ಪ್ರಗತಿಯನ್ನು ನಿರಂತರವಾಗಿ ದಾಖಲಿಸುವುದು<br>• ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಪರಿಹಾರಾತ್ಮಕ (Remedial) ಬೋಧನೆ ಒದಗಿಸುವುದು.<br>• ಕಲಿಕಾ ಫಲಿತಾಂಶ, ಮೌಲ್ಯಮಾಪನ ವಿಧಾನ ಮತ್ತು ವಿದ್ಯಾರ್ಥಿಗಳ ಸಾಧನೆಯನ್ನು ದಾಖಲಿಸಲು ಸಹಾಯಕವಾಗುವುದು.<br><br>ಈಗಾಗಲೇ ಪ್ರೌಢ ಶಾಲಾ ವಿಭಾಗದಲ್ಲಿ "ಘಟಕ ಆಧಾರಿತ ಮೌಲ್ಯಮಾಪನ" (LESSON BASED ASSESSEMENT) ಅನುಷ್ಠಾನಗೊಳಿಸಲಾಗುತ್ತಿದೆ. ಅದೇ ಮಾದರಿಯಲ್ಲಿ ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳಲ್ಲಿನ ಪ್ರಥಮ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ನಡೆಸಲಾಗುತ್ತಿದೆ.</td>
</tr>
</table>

ಸಂಖ್ಯೆ: ಇಪಿ 249 ಡಿಜಿಡಬ್ಲ್ಯೂ 2026

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು